ಓ. ಎಸ್ . 138/2020 ಪಿ.ಡಬ್ಲ್ಯೂ - 1 ಅಜಿತಕುಮಾರ ಚೌಗಲಾ

**(ದಿನಾಂಕಃ 12-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ : ವಾದಿ ಪರ ಶ್ರೀ. ಆರ್ ವಿ ಜೆ ವಕೀಲರಿಂದ -**

ನಾನು ಈ ದಾವೆಯಲ್ಲಿ ವಾದಿ ನಂ. 2 ಇರುತ್ತೇನೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿ ಬರೆದ ಎಲ್ಲ ಸಂಗತಿಗಳು ಸತ್ಯವಾಗಿರುತ್ತದೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

ಈ ದಿನ ನಾನು ನನ್ನ ಪರವಾಗಿ ಕೆಲವೊಂದು ದಾಖಲೆಗಳನ್ನು ಸಲ್ಲಿಸುತ್ತಿದ್ದೇನೆ . ಅವುಗಳನ್ನು ನನ್ನ ಪರವಾಗಿ ನಿಶಾನೆಗಳಾಗಿ ಗುರುತಿಸಬೇಕೆಂದು ಕೋರಿಕೊಳ್ಳುತ್ತೇನೆ.

ವಾದಿ ಸಲ್ಲಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ನಿಶಾನೆಗಳಾಗಿ ಗುರುತಿಸಲಾಗಿದೆ.

| ದಾಖಲಾತಿಗಳ ವಿವರ | ನಿಶಾನೆ |
|---|---|
| ಕೊಟಬಾಗಿ ಗ್ರಾಮದ ಎಂ ಇ 2096 ಇದರ ದೃಢೀಕೃತ ನಕಲನ್ನು | ನಿ.ಪಿ-1 |
| ಎಂ ಆರ್ ನಂ. ಎಚ್ - 69/2015-16 ರ ದಾಖಲನ್ನು | ನಿ.ಪಿ-2 |
| ಕೊಟಬಾಗಿ ಗ್ರಾಮದ ಎಂ ಇ 4261 ಇದರ ದೃಢೀಕೃತ ನಕಲನ್ನು | ನಿ.ಪಿ-3 |
| ಕೊಟಬಾಗಿ ಗ್ರಾಮದ ಸರ್ವೆ ನಂ. 457 ಇದರ 1999-2000 ರಿಂದ 2002-03 ರ ಆರ್ ಟಿ ಸಿ | ನಿ.ಪಿ-4 |
| ಕಾಡಪ್ಪ ಮತ್ತು ಶಿವಲಿಂಗ ಇವರಿಗೆ ಆದಂತಹ ದಿನಾಂಕ 24-02-1971 ರ ಖರೀದಿ ಪತ್ರದ ದೃಢೀಕೃತ ನಕಲು ( ಮೂಲ ಖರೀದಿ ಪತ್ರ ಶಿವಲಿಂಗ ಹಂಚಿನಾಳ ಇವರ ಹತ್ತಿರ ಇರುತ್ತದೆ) | ನಿ.ಪಿ-5 |
| 5 ಫೋಟೊ ಮತ್ತು 1 ಸಿಡಿ | ನಿ.ಪಿ-6ರಿಂದ 11 |
| ಕೊಟಬಾಗಿ ಗ್ರಾಮದ ಗ್ರಾಮ ನಕಾಶೆ | ನಿ.ಪಿ-12 |

ನನ್ನ ಜಮೀನಿನ ಪೂರ್ವಕ್ಕೆ ದಾರಿ ಇದೆ . ಸದರಿ ದಾರಿ ವಗ್ರಾಮ ನಕಾಶೆಯಲ್ಲಿ ಇರುವುದಿಲ್ಲ. ನನ್ನ ತಂದೆ ಕಾಡಪ್ಪ ಪರಪ್ಪ ಚೌಗಲಾ ಮತ್ತು ಶಿವಲಿಂಗ ಹಂಚಿನಾಳ ಇವರು ಜಂಟಿಯಾಗಿ ಜಮೀನ ಸರ್ವೆ ನಂ. 458 ಕ್ಷೇತ್ರ 3 ಎಕರೆ 19 ಗುಂಟೆಯನ್ನು ಖರೀದಿ ಮಾಡಿದ ನಂತರ ಪೂರ್ವಕ್ಕೆ ಅಪಸಾತಿಯಲ್ಲಿ 12 ಫೂಟು ಅಗಲದ ದಾರಿ ಬಿಟ್ಟುಕೊಂಡಿದ್ದೆವು.

ನನ್ನ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಪಾಟಿ ಸವಾಲು : ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

(ಆದಿತ್ಯ ಆರ್. ಕಲಾಲ್)
ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ